

# ಕರಡಿಯ ಗಾಯ ನರಿಗೆ ರಕ್ತ

ಪಾಕಿಸ್ತಾನದ ಬಾಲಾಕೋಟ್ ಉಗ್ರಗಾಮಿ ತರಬೇತಿ ಶಿಬಿರಗಳ ಮೇಲೆ ಭಾರತೀಯ ವಾಯುಪಡೆ ನಡೆಸಿದ ನಿಖರ ದಾಳಿಯ ಗುರಿ ಹುಡುಕಿಕೊಟ್ಟಿದ್ದು ಗುಪ್ತಚರ ಸಂಸ್ಥೆ 'ರಾ'. ವಿದೇಶಗಳಲ್ಲಿ ಗುಪ್ತ ಮಾಹಿತಿ ಸಂಗ್ರಹ ಮತ್ತು ವಿಶ್ಲೇಷಣೆಗೆ ಸೀಮಿತವಾದ ಈ ಸಂಸ್ಥೆ ಜಾಗತಿಕ ವೇದಿಕೆಗಳಲ್ಲಿ ಭಾರತಕ್ಕೆ ಪೂರಕ ವಾತಾವರಣ ನಿರ್ಮಿಸಲು ಸತತ ಶ್ರಮಿಸುತ್ತದೆ. ತನ್ನ 50 ವರ್ಷಗಳ ಇತಿಹಾಸದಲ್ಲಿ 'ರಾ' ನಿರ್ವಹಿಸಿದ ಮೂರು ಪ್ರಮುಖ ಕಾರ್ಯಾಚರಣೆಗಳ ಮಾಹಿತಿ ಇಲ್ಲಿದೆ.

■ ಘನಶ್ಯಾಮ ಡಿ.ಎಂ.

'ಭಾರತದೊಂದಿಗೆ ನಾವು ಸಾವಿರ ವರ್ಷಗಳ ಯುದ್ಧ ಮಾಡುತ್ತೇವೆ. ದೊಡ್ಡಕರಡಿಯನ್ನು ನೇರ ಯುದ್ಧದಲ್ಲಿ ಮಣಿಸಲು ಆಗದು. ಆದರೆ ಅದರ ಮೈಮೇಲೆ ಸಾವಿರ ಗಾಯಗಳನ್ನು ಮಾಡಿ ನೆತ್ತರು ಸೋರುವಂತೆ ಮಾಡಿದರೆ ಅದು ಬಲಹೀನವಾಗುತ್ತದೆ. ಆಮೇಲೆ ಅದನ್ನು ಸೋಲಿಸುವುದು ಎಷ್ಟು ಹೊತ್ತಿನ ಕೆಲಸ?'

ಪಾಕ್ ಸೇನೆ ಮತ್ತು ಅದರ ಮರ್ಜಿಯಲ್ಲಿಯೇ ನಡೆಯುವ ಅಲ್ಲಿನ ಸರ್ಕಾರ ಅನೇಕ ವರ್ಷಗಳಿಂದ ಭಾರತದ ವಿರುದ್ಧ ಸಾಧಿಸಿಕೊಂಡು ಬಂದಿರುವ ಯುದ್ಧೋನ್ಮಾದದ ಆಧಾರಸೂತ್ರದಂತಿರುವ ಮಾತುಗಳಿವು. ವಿಶ್ವಸಂಸ್ಥೆಯಲ್ಲಿ (1965) ಭಾಷಣ ಮಾಡಿದ ಝುಲ್ಫಿಕರ್ ಅಲಿ ಭುಟ್ಟೊ 'ಭಾರತದ ವಿರುದ್ಧ ಸಾವಿರ ವರ್ಷಗಳ ಯುದ್ಧ' ಘೋಷಿಸಿದ್ದರು. ಈ ಮಾತಿಗೆ ಪೂರಕವಾಗಿ ಅಂದಿನ ಪಾಕ್ ಸೇನೆಯ ಜನರಲ್ ಆಗಿದ್ದ ಝಿಯಾ ಉಲ್ ಹಕ್ 'ಕರಡಿಗೆ ಸಾವಿರ ಗಾಯ ಮಾಡಿ ರಕ್ತ ಬಸಿಯುತ್ತೇವೆ' ಎಂದು ಶಪಥ ಮಾಡಿದ್ದರು.

54 ವರ್ಷಗಳ ಹಿಂದಿನ ಪಾಕ್ ರಣೋತ್ಸಾಹ ಈಗ ನೆನಪಾಗಲು ಕಾರಣವಿದೆ. ಕಾಶ್ಮೀರದ ಪುಲ್ವಾಮಾದಲ್ಲಿ 'ಸಿಆರ್‌ಪಿಎಫ್' ಬಸ್ ಮೇಲೆ ನಡೆದ ದಾಳಿ, 40 ಯೋಧರ ಬಲಿದಾನ, ಇದಕ್ಕೆ ಸೇಡು ತೀರಿಸಿಕೊಳ್ಳಲೆಂದು ಭಾರತೀಯ ವಾಯುಪಡೆ ಬಾಲಾಕೋಟ್‌ನಲ್ಲಿದ್ದ ಜೈಷ್ ಎಮೊಹಮದ್ ಉಗ್ರಗಾಮಿ ಸಂಘಟನೆಯ ತರಬೇತಿ ಕೇಂದ್ರದ ಮೇಲೆ ಬಾಂಬ್ ಸುರಿಸಿದ್ದು ಈಗ ಇತಿಹಾಸ. ಕಾರ್ಯಾಚರಣೆಯ ನಂತರದ ಬೆಳವಣಿಗೆಗಳಲ್ಲಿ ವಾಯುಪಡೆಯ ಪೈಲಟ್ ಅಭಿನಂದನ್ ವರ್ಧಮಾನ್ ಪಾಕ್‌ಗೆ ಸೆರೆ ಸಿಕ್ಕಿದ್ದು, ನಂತರ ಬಿಡುಗಡೆಯಾಗಿದ್ದು ವಿಶ್ವದ ಗಮನ ಸೆಳೆದ ಪ್ರಮುಖ ಸಂಗತಿ.

'ಭಾರತದ ವಿಮಾನಗಳು ಕಾಡಿನಲ್ಲಿ ಬಾಂಬ್ ಹಾಕಿ ಓಡಿಹೋದವು' ಎಂದು ಪಾಕಿಸ್ತಾನ ಆರೋಪಿಸಿದ್ದು, 'ನಾವು ಕಾಡಿನ ಮೇಲೆ ಬಾಂಬ್ ಹಾಕಿದ್ದರೆ ನೀವೇಕೆ ವ್ಯೂಹ ರಚಿಸಿಕೊಂಡು ನಮ್ಮ ಮೇಲೆ ದಾಳಿಗೆ ಬರುತ್ತಿದ್ದೀರಿ' ಎಂದು ಭಾರತ ಆತ್ಮವಿಶ್ವಾಸದಿಂದ ತಿರುಗೇಟು ನೀಡಿದ್ದನ್ನು ಜಗತ್ತು ಬೆರಗಾಗಿ ಗಮನಿಸಿತು. ಇದೀಗ ಸೇನಾ ಕಾರ್ಯಾಚರಣೆಯನ್ನು ಚುನಾವಣಾ ಲಾಭಕ್ಕೆ ಬಳಸಿಕೊಳ್ಳುವ ಬಿಜೆಪಿ ಯತ್ನದ ಬಗ್ಗೆ ಆಕ್ರೋಶ ವ್ಯಕ್ತವಾಗುತ್ತಿದೆ. ಚುನಾವಣಾ ಆಯೋಗವು ಖಡಕ್ ಎಚ್ಚರಿಕೆ ರವಾನಿಸಿ, 'ಸಶಸ್ತ್ರ ಪಡೆಗಳನ್ನು ರಾಜಕೀಯಕ್ಕೆ ಬಳಸಬೇಡಿ' ಎಂದು ಸೂಚಿಸಿದೆ.

ಇಷ್ಟೆಲ್ಲದರ ನಡುವೆ ಪಾಕಿಸ್ತಾನ 1965ರಲ್ಲಿ ಮಾಡಿದ್ದ 'ಸಾವಿರ ವರ್ಷಗಳ ಯುದ್ಧ'ದ ಘೋಷಣೆ, ಅಲ್ಲಿನ ಸೇನಾ ನಾಯಕರು ರೂಪಿಸಿದ್ದ 'ದೊಡ್ಡ ಕರಡಿಗೆ ಸಾವಿರ ಗಾಯಗಳ ಪ್ರತಿಜ್ಞೆ' ಹಲವರಿಗೆ ನೆನಪಾಗುತ್ತಿದೆ. ಸಾವಿರ ಗಾಯ ಮಾಡಲು ಬಂದ ನರಿಯಿಂದ ದೊಡ್ಡ ಕರಡಿಯನ್ನು ಕಾಪಾಡಲು ಸದ್ದಿಲ್ಲದೆ ಬಲಿದಾನ ಮಾಡುವ, ಹುತಾತ್ಮರ ಗೌರವವನ್ನೂ ಅಪೇಕ್ಷಿಸದ ಸಾವಿರಾರು ಮಂದಿ ಇರುವ ಸಂಸ್ಥೆಯನ್ನು, ಆ ಸಂಸ್ಥೆಯ ಸಾವಿರಾರು ಅನಾಮಿಕ ಹುತಾತ್ಮರನ್ನು ಇಂದು ನಾವು ನೆನಪಿಸಿಕೊಳ್ಳಲೇಬೇಕಿದೆ.